# ಜಿಲ್ಲಾ ಮತ್ತು ವಿಶೇಷ ನ್ಯಾಯಾಲಯ, ಯಾದಗಿರಿ

ವಿಶೇಷ ಪ್ರಕರಣ ನಂ. 40/2016

ಕರ್ನಾಟಕ ಲೋಕಾಯುಕ್ತ ಪೋಲೀಸ ಠಾಣೆ, ಯಾದಗಿರಿ. ......ಪಿರ್ಯಾದಿ

ವಿರುದ್ಧ

ಬಂಡೆಪ್ಪ ........ಆರೋಪಿ

<u>ದೋಷಾರೋಪಣೆ</u>

ನಾನು ಶ್ರೀ.ಶಿವನಗೌಡ ಬಿಕಾಂ.,ಎಲ್ಎಲ್.ಬಿ(ಸ್ಪೆಷಲ್), ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಯಾದಗಿರಿ, ಆರೋಪಿತನಾದಃ

ಬಂಡೆಪ್ಪ ತಂದೆ ಬಂದಯ್ಯ ಆಕಳ, ವಯಾಃ 55 ವರ್ಷ
ಉದ್ಯೋಗಃ ಸಹಾಯಕ ಕಾರ್ಯನಿರ್ವಾಹಕ ಅಭೀಯಂತರರು ಹಾಗೂ ಪ್ರಭಾರಿ
ಯೋಜನಾ ನಿರ್ದೇಶಕರು, ನಗರಾಭಿವೃಧಿ ಕೋಶ ಜಿಲ್ಲಾಧಿಕಾರಿಗಳ
ಕಾರ್ಯಾಲಯ, ಯಾದಗಿರಿ, ಸಧ್ಯ ಮಾಹನಗರ ಪಾಲಿಕೆ ಕಲಬುರಗಿ.

ನಿನ್ನನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರುಪಡಿಸುತ್ತೇನೆ.

ಮೇಲೆ ಹೆಸರಿಸಿದ ಆರೋಪಿತನಾದ ನೀನು, ಯಾದಗಿರಿ ಲಂಚ ನಿಷೇಧ ಕಾಯ್ದೆ ಕಲಂ.2(ಸಿ)ರ ಪ್ರಕಾರ ಸರ್ಕಾರಿ ನೌಕನಾಗಿದ್ದು, ನೀನು ನಿಮ್ಮ ಸರ್ಕಾರಿ ಸೇವೆಯಲ್ಲಿ ಡಿಸೆಂಬರ್-1990 ರಿಂದ 1996ರ ಮಾರ್ಚ್ ರವರಿಗೆ ದಿನಗೂಲಿ ನೌಕರನಾಗಿ ನಂತರ ಮಾಚ್-1996 ರಿಂದ ಖಾಯಂ ನೌಕರನಾಗಿ ಸೇರಿ ವಿವಿಧ ಸ್ಥಳಗಳಲ್ಲಿ ಕರ್ತವ್ಯೆ ನಿರ್ವಹಿಸಿ, ದಿಃ 13.03.1996 ರಿಂದ 29.08.2013ರ ವರೆಗೆ ಸರ್ಕಾರಿ ಸೇವೆಯಲ್ಲಿ ತಮ್ಮ ಅಧಿಕಾರದ ಅವಧಿಯಲ್ಲಿ ಬಲ್ಲ ಮೂಲಗಳ ಆದಾಯಕ್ಕಿಂತ ವಿಭಿನ್ನ ರೂಪದ ಹೆಚ್ಚಿನ ಆಸ್ತಿ ಗಳಿಸಿರುತ್ತೀರಿ.

ಆರೋಪಿಯಾದ ನೀನು ನಿನ್ನ ಕುಟುಂಬದ ಸದಸ್ಯರ ಹೆಸರಿನಲ್ಲಿ ಒಟ್ಟು ರೂ. 69,86,988/- ರಷ್ಟು ಆಸ್ತಿ ಹೊಂದಿದ್ದು, ಮೇಲಿನ ಅವಧಿಯಲ್ಲಿ ಒಟ್ಟು ರೂ. 57,83,486/- ರಷ್ಟು ಖರ್ಚು ಮಾಡಿರುತ್ತೀರಿ.

ಆರೋಪಿಯಾದ ನೀನು ಎಲ್ಲಾ ಬಲ್ಲ ಮೂಲಗಳಿಂದ ಬಂದ ಆದಾಯವನ್ನು ಒಟ್ಟಾರೆ ಲೆಕ್ಕ ಹಾಕಲಾಗಿ ರೂ. 57,90,562/- ರಷ್ಟು ಆಗಿರುತ್ತದೆ. ನೀನು ಹೊಂದಿದ ಸ್ಥಿರ ಮತ್ತು ಚರಾಸ್ತಿ ಹಾಗೂ ಮಾಡಿರುವ ಖರ್ಚನ್ನು ಒಟ್ಟು ಗೂಡಿಸಿ ಆದಾಯವನ್ನು ಕಳೆಯಲಾಗಿ, ಒಟ್ಟು

ರೂ. 69,15,253/-ಗಳ ಅಸಮತೋಲನ ಸಂಪಾದನೆಯನ್ನು ನಿನ್ನ ಬಲ್ಲ ಮೂಲಗಳ ಆದಾಯಕ್ಕಿಂತ ಶೇಃ119.42 % ರಷ್ಟು ಹೆಚ್ಚಿಗೆ ಆಸ್ತಿ ಸಂಪಾದಿಸಿರುವುದು ದೃಡಪಟ್ಟಿರುತ್ತದೆ, ತನ್ಮೂಲಕ ನೀನು ಕಲಂ.13(1)(ಇ) ಜೊತೆಯಲ್ಲಿ ಓದಲಾದ ಕಲಂ.13(2)ರಲಂಚ ನೀಷೇಧ ಕಾಯ್ದೆ 1988ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕಃ 11.02.2020 ರಂದು ಆದೇಶಿಸಿದ್ದೇನೆ.

ಸ್ಥಳ ಃ ಯಾದಗಿರಿ

ಜಿಲ್ಲಾ ಮತ್ತು ವಿಶೇಷ ನ್ಯಾಯಾಧೀಶರು
ಯಾದಗಿರಿ